**ಕರ್ನಾಟಕ ವಿಧಾನ ಪರಿಷತ್ತು**

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1225 |
| ಮಾನ್ಯ ಸದಸ್ಯರ ಹೆಸರು | ಶ್ರೀ ಎಂ.ಎಲ್. ಅನೀಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 17.12.2025 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ರೈತರಿಗೆ ಸರ್ಕಾರದಿಂದ ಮಂಜೂರಿಯಾದ ಪ್ರಕರಣಗಳಲ್ಲಿ ಈಗಾಗಲೇ ದರಖಾಸ್ತು ಪೋಡಿಯಾಗಿ ಹೊಸ ಸರ್ವೆ ನಂಬರ್‌ಗಳಾಗಿದ್ದು, ಪಹಣಿ ಇಂಡೀಕರಣ ಆಗದಿರುವ ಪ್ರಕರಣಗಳ ಸಂಖ್ಯೆ ಎಷ್ಟು; (ಸಂಪೂರ್ಣವಾದ ಮಾಹಿತಿ ನೀಡುವುದು) | ರಾಜ್ಯದಲ್ಲಿ ರೈತರಿಗೆ ಸರ್ಕಾರದಿಂದ ಮಂಜೂರಿಯಾದ ಪ್ರಕರಣಗಳಲ್ಲಿ ದರಖಾಸ್ತು ಪೋಡಿ ಆಂದೋಲನದಡಿ ಪೋಡಿಯಾಗಿ ಸೃಜನೆಯಾಗಿರುವ **3,113** ಹೊಸ ಸರ್ವೆ ನಂಬರುಗಳು ಪಹಣಿ ಇಂಡೀಕರಣಕ್ಕಾಗಿ ಬಾಕಿಯಿರುತ್ತವೆ. ದರಖಾಸ್ತು ಪೋಡಿ ಆಂದೋಲನದಡಿ ಪೋಡಿಯಾಗಿ ಹೊಸ ಸರ್ವೆ ನಂ. ಗಳಾಗಿದ್ದು, ಪಹಣಿ ಇಂಡೀಕರಣ ಆಗದಿರುವ ಜಿಲ್ಲಾವಾರು ವಿವರವನ್ನು ಅನುಬಂಧದಲ್ಲಿ ಲಗತ್ತಿಸಿದೆ. |
| ಆ) | ಈ ಪೈಕಿ ಪೋಡಿಯಾಗಿ ಹೊಸ ಸರ್ವೆ ನಂ. ಗಳಾಗಿದ್ದರೂ ಡಿ.ಡಿ.ಎಲ್.ಆರ್. ರವರ ಮೇಲು ಸಹಿ ಆಗದೇ, ಬಾಕಿ ಇರುವ ಪ್ರಕರಣಗಳು ಎಷ್ಟು; ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; (ಸರ್ವೆ ನಂ. ವಾರು ಸಂಪೂರ್ಣವಾದ ಮಾಹಿತಿ ನೀಡುವುದು) | ಪ್ರಸ್ತುತ ದರಖಾಸ್ತು ಪೋಡಿ ಪ್ರಕಣಗಳಲ್ಲಿ ಅಳತೆಯಾಗಿ ಮಂಜೂರಿಯಂತೆ ಹೊಸ ನಂಬರ್ ನೀಡಿ ಪೋಡಿ ದಾಖಲೆಗಳು ಮತ್ತು ದುರಸ್ತಿ ಆಕಾರಬಂದು ತಯಾರಿಸಲಾಗುತ್ತದೆ. ಆನಂತರ ಕಾನೂನಿನ ಅನ್ವಯ ದುರಸ್ತಿ ಆಕಾರಬಂದಗೆ ಸಂಬಂಧಿಸಿದ ಭೂದಾಖಲೆಗಳ ಉಪ ನಿರ್ದೇಶಕರು ಮೇಲು ಸಹಿ ಮಾಡುವವರೆಗೆ ಪೋಡಿ ಪ್ರಕ್ರಿಯೆ/ ದಾಖಲೆಗಳು ಅಂತಿಮವಾಗುವುದಿಲ್ಲ ಮತ್ತು ಭೂದಾಖಲೆಗಳ ಉಪ ನಿರ್ದೇಶಕರು ಮೇಲು ಸಹಿ ಇಲ್ಲದ ದರಖಾಸ್ತು ಪೋಡಿ ದಾಖಲೆಗಳು ಕಾನೂನಿನ್ವಯ ಸಿಂದುವಾಗುವುದಿಲ್ಲ.<br><br>ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಇಂತಹ ಪ್ರಕರಣಗಳು ಇರುವುದಿಲ್ಲ. |
| ಇ) | ಈಗಾಗಲೇ ಪೋಡಿಯಾಗಿ ಹೊಸ ಸರ್ವೆ ನಂ. ಗಳನ್ನು ಪಹಣಿಗಳಲ್ಲಿ ತ್ವರಿತಗತಿಯಲ್ಲಿ ಇಂಡೀಕರಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? (ಸಂಪೂರ್ಣವಾದ ಮಾಹಿತಿ ನೀಡುವುದು) | ದರಖಾಸ್ತು ಪೋಡಿ ಆಂದೋಲನದಡಿ ಪೋಡಿಯಾಗಿ ಹೊಸ ನಂಬರ ನೀಡಿದ ತಕ್ಷಣ ಪೋಡಿ ಮಾಹಿತಿಯಂತೆ ಪಹಣಿ ಇಂಡೀಕರಣ ಮಾಡುವ ಕುರಿತು Auto Mutation ಪ್ರಕ್ರಿಯೆ ನಡೆಸುವ ಸಲುವಾಗಿ ಆನ್‌ಲೈನ್ ಮುಖಾಂತರ ಮಾಹಿತಿಯನ್ನು XML FILE ಮಾದರಿಯಲ್ಲಿ ಭೂಮಿ ತಂತ್ರಾಂಶಕ್ಕೆ ರವಾನಿಸಲಾಗುತ್ತದೆ. ಇದರಿಂದಾಗಿ, ಪೋಡಿಯಾಗಿರುವ ಹೊಸ ನಂಬರಗಳ ಪಹಣಿ ಇಂಡೀಕರಣ ಆಗುವಲ್ಲಿ ಯಾವುದೇ ವಿಳಂಬವಾಗುತ್ತಿರುವುದಿಲ್ಲ. |

**ಸಂಖ್ಯೆ: ಕಂಇ 233 ಎಸ್‌ಎಸ್‌ಸಿ 2025**

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

ಅನುಭಂದ-1 LCQ- (1225)1037

## ದರಖಾಸ್ತು ಪೋಡಿ ಆಂದೋಲನದಡಿ ಪೋಡಿಯಾಗಿ ಪಹಣಿ ಇಂಡೀಕರಣ ಆಗದಿರುವ ಜಿಲ್ಲಾವಾರು ವಿವರ

| ಜಿಲ್ಲೆ | ದರಖಾಸ್ತು ಪೋಡಿ ಆಂದೋಲನದಡಿ ಪೋಡಿಯಾಗಿ ಪಹಣಿ ಇಂಡಿಕರಣವಾಗದಿರುವ ಮಂಜೂರಿದಾರರ ಸಂಖ್ಯೆ |
|---|---|
| Yadagir | 0 |
| Vijayapura | 2 |
| Vijayanagara | 0 |
| Uttar Kannada | 22 |
| Udupi | 14 |
| Tumakuru | 182 |
| Shivamogga | 1 |
| Raichur | 0 |
| Mysore | 36 |
| Mandya | 48 |
| Koppal | 25 |
| Kolar | 1462 |
| Kodagu | 47 |
| Kalaburagi | 2 |
| Haveri | 1 |
| Hassan | 308 |
| Gadag | 0 |
| Dharwad | 2 |
| Davanagere | 3 |
| Dakshina Kannada | 6 |
| Chitradurga | 153 |
| Chikkamagaluru | 60 |
| Chikkaballapur | 361 |
| Chamarajanagara | 25 |
| Bidar | 0 |
| Bengaluru South | 288 |
| Bengaluru | 0 |
| Belagavi | 5 |
| Bangalore Rural | 59 |
| Ballari | 1 |
| Bagalkote | 0 |
| **Total** | **3,113** |